4	ಬಿಲ್ ಅಂಡ್ ಬೇಲ್ ಪಿಂಗಲ್ ಇಂಜಿನ್ ಹೆಲಿಕಾಪ್ಟರ್ ಬೇಲ್ 206 ಎಲ್ 3	4 ಪ್ರಯಾಣಿಕರು	70,000–00
5	ಟ್ವಿನ್ ಇಕ್ವಿರೆಲ್ ಎ ಎಸ್ 355 ಎಫ್ 1 ಟ್ವಿನ್ ಇಂಜಿನ್ ಹೆಲಿಕಾಪ್ಟರ್	3 ಪ್ರಯಾಣಿಕರು	85,000–00

ಈ) ಯಾರು ಯಾರಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದುಕೊಳ್ಳಲಾಗುವುದು?

ಮಾನ್ಯ ಮುಖ್ಯ ಮಂತ್ರಿಯವರು ಹಾಗೂ ಇತರೆ ಗಣ್ಯ ವ್ಯಕ್ತಿಗಳ ಅಧಿಕೃತ ಪ್ರವಾಸ ಕಾರ್ಯಕ್ರಮಗಾಗಿ ಈ ಕೆಳಕಂಡ ಸಂಸ್ಥೆಗಳಿಂದ ಹೆಲಿಕಾಪ್ಟರ್‌ಗಳನ್ನು ಬಾಡಿಗೆಗೆ ತೆಗೆದು ಕೊಳ್ಳಲಾಗುತ್ತದೆ

1 ಮೆ ಹಿಂದೂಸ್ಥಾನ್ ಏರೋನಾಟಿಕ್ ಲಿಮಿಟೆಡ್, ಬೆಂಗಳೂರು (ವೆಟ್ ಲೀಸ್ ಆಧಾರದ ಮೇಲೆ)

2 ಮೆ ಡೆಕ್ಕನ್ ಏವಿಯೇಷನ್ಸ್, ಬೆಂಗಳೂರು

3 ಮೆ ಯು ಬಿ ಏರ್ ಲಿಮಿಟೆಡ್, ಬೆಂಗಳೂರು

4 ಮೆ ಇಂಡಿಯನ್ ಏರ್‌ಫೋರ್ಸ್, ರಕ್ಷಣಾ ಇಲಾಖೆ ಯಲಹಂಕ, ಬೆಂಗಳೂರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1178(1336)**
ಮಾನ್ಯ ಸದಸ್ಯರ ಹೆಸರು **ಶ್ರೀಮತಿ ಭಾಗೀರಥಿ (ಕೊಟ್ಟೂರು)**
ಉತ್ತರಿಸುವ ಸಚಿವರು **ಶ್ರೀ ಸಿ ಎಂ ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**

1) 2004-05 ಮತ್ತು 2006–07ನೇ ಸಾಲಿನಲ್ಲಿ ಕೊಡ್ಲಿಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಕೂಡ್ಲಗಿ ತಾಲ್ಲೂಕಿನ ಜಿಲ್ಲಾ ಪಂಚಾಯತ್ ರಸ್ತೆಗಳ ದುರಸ್ತಿಗಾಗಿ 2004–05 ಮತ್ತು 2006–07ನೇ ಸಾಲಿಗೆ ಈ ಕೆಳಗಿನಂತೆ ಹಣ ಬಿಡುಗಡೆಯಾಗಿರುತ್ತದೆ

ಕ್ರ ಸಂ	ವಿವರ	ಬಿಡುಗಡೆಯಾದ ಹಣ (ರೂ ಲಕ್ಷಗಳಲ್ಲಿ)	
		2004–05	2006–07
1	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ–3054	41 23	109 43
2	12ನೇ ಹಣಕಾಸು (ರಸ್ತೆ ನಿರ್ವಹಣೆ		57 95

ಒಟ್ಟು	41 23	167 38

2 ಈ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಿರುತ್ತದೆ

3 ಬಂದಿದ್ದಲ್ಲಿ ಪರಿಹಾರಕೆ ಯಾವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಹಣ ಬಿಡುಗಡೆ ಮಾಡಲಾಗಿದೆ?

ಕುಡಿಯುವ ನೀರಿನ ಸಮಸ್ಯೆ ಕಂಡು ಬಂದ ಗ್ರಾಮಗಳಲ್ಲಿ ಪರಿಹಾರಕ್ಕಾಗಿ ಈ ಕೆಳಗಿನಂತೆ ಹಣ ಬಿಡುಗಡೆಯಾಗಿರುತ್ತದೆ

ಕ್ರ ಸಂ	ಯೋಜನೆ	ಲೆಕ್ಕಶೀರ್ಷಿಕೆ	ಬಿಡುಗಡೆಯಾದ ಅನುದಾನ (ರೂ ಲಕ್ಷಗಳಲ್ಲಿ)
1	ರಾಜ್ಯವಲಯ	2215	92 16
2	ಕೇಂದ್ರವಲಯ	4215	323 44
	ಒಟ್ಟು		415 60

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1176(1334)**

ಮಾನ್ಯ ಸದಸ್ಯರ ಹೆಸರು **ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ)**

ಉತ್ತರಿಸುವ ಸಚಿವರು **ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)**

ಅ) ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ ರಾಜ್ಯದ ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಹಾಗೂ ಕುಡಿಯುವ ನೀರಿಗಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆಯೇ,

ಕಾವೇರಿ ನ್ಯಾಯಾಧಿಕರಣದ ತೀರ್ಪಿನಿಂದ, ಕಾವೇರಿ ಜಲಾನಯನ ಪ್ರದೇಶದಲ್ಲಿ, ನೀರಾವರಿಗಾಗಿ 250 62 ಟಿ ಎಂ ಸಿ ಮತ್ತು ಗೃಹಬಳಕೆ ಹಾಗೂ ಕೈಗಾರಿಕಾ ಬಳಕೆಗಾಗಿ 1 85 ಟಿ ಎಂ ಸಿ ನೀರನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ

ಆ) ಈ ತೀರ್ಪಿನಿಂದ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ಅಂತಿಮ ಅದೇಶದ ಕುರಿತು ತೆಗೆದುಕೊಳ್ಳಬಹುದಾದ ಮುಂದಿನ ಕ್ರಮಗಳ ಬಗ್ಗೆ ನ್ಯಾಯವಾದಿಗಳ ಅಭಿಪ್ರಾಯದಂತೆ ಭಾರತ ಸಂವಿಧಾನದ ಅನುಚ್ಛೇದ 131 ಹಾಗೂ 136ರ ಅಡಿ